ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 28/2010**

**ಪ್ರಾಸಾ- 26 ಚಾಸಾ- 33**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸಂಜಯ್ ಟಿ ಎಲ್ |
| ತಂದೆಯ ಹೆಸರುಃ | : | ಲೋಕೇಶ ಮೂರ್ತಿ ಟಿ ಎಸ್ |
| ವಯಸ್ಸುಃ | : | 48 ವರ್ಷ |
| ಉದ್ಯೋಗಃ | : | ವ್ಯವಸ್ಥಾಪಕರು, ಆ್ಯಕ್ಸಿಸ್ ಬ್ಯಾಂಕ್ |
| ವಾಸ | : | ಮೈಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 03-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಶಿವಮೊಗ್ಗದ ಐ ಎನ್ ಜಿ ವೈಶ್ಯ ಬ್ಯಾಂಕ್ ನಲ್ಲಿ 2009 ರಿಂದ 2011ರ ಮಾರ್ಚ್ ವರೆಗೆ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಆ ಅವಧಿಯಲ್ಲಿ ಬೆಂಗಳೂರು ಸಿಐಡಿ ಪೊಲೀಸ್ ಉಪಾಧೀಕ್ಷಕರು ಶಿವಮೊಗ್ಗದ ರಾಜು ಏಜೆನ್ಸಿಗೆ ಸಂಬಂಧಪಟ್ಟ ಬ್ಯಾಂಕ್ ತಃಖ್ತೆ ಕೊಡಬೇಕೆಂದು ಮನವಿ ಸಲ್ಲಿಸಿದ್ದರು. ಅದರಂತೆ ಈಗ ನೋಡುತ್ತಿರುವ ದಿಃ3-2-2010ರ ಪತ್ರದೊಂದಿಗೆ ಸದರಿ ದಾಖಲೆಗಳನ್ನು ಒದಗಿಸಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ನಿಪಿ-47 ಎಂದು ಸಾಕ್ಷಿಯ ರುಜುವನ್ನು ನಿಪಿ-47(ಎ) ಎಂದು ಗುರುತಿಸಲಾಯಿತು. ಸದರಿ ಬ್ಯಾಂಕ್ ತಃಖ್ತೆಗಳು ಒಟ್ಟು 30 ಪುಟಗಳನ್ನೊಳಗೊಂಡಿದ್ದು ಒಟ್ಟಾಗಿ ನಿಪಿ-47(1) ಎಂದು ಗುರುತಿಸಲಾಯಿತು. ಅಲ್ಲದೆ ರಾಜು ಏಜೆನ್ಸಿಯವರ ಖಾತೆಗೆ ರವೀಂದ್ರನಾಥ್ ರವರು ನೀಡಿದ ಚೆಕ್ ಮೂಲಕ ಹಣ ಜಮಾ ಆಗಿರುವ ಬಗ್ಗೆ ಚೆಕ್ ವಿವರಗಳನ್ನು ನೀಡುವಂತೆ ಕೇಳಿಕೊಂಡಿದ್ದರು. ನಾನು ನಮ್ಮಲ್ಲಿ ಲಭ್ಯವಿದ್ದ ಚೆಕ್ ಗಳನ್ನು ದೃಢೀಕರಿಸಿ ದಿಃ18-3-2010ರ ಪತ್ರದೊಂದಿಗೆ ಕೊಟ್ಟಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ನಿಪಿ-48 ಎಂದು ಸಾಕ್ಷಿಯ ರುಜುವನ್ನು ನಿಪಿ-48(ಎ) ಎಂದು ಗುರುತಿಸಲಾಯಿತು. ಸದರಿ ಚೆಕ್ಕುಗಳ ದೃಡೀಕೃತ ಪ್ರತಿಯನ್ನು ಈಗ ನೋಡುತ್ತಿದ್ದು ಅವು 18 ದಾಖಲೆಗಳಿದ್ದು ಅವುಗಳನ್ನು ಒಟ್ಟಾಗಿ ನಿಪಿ-49ಎಂದು ಅದರಲ್ಲಿರುವ ಸಾಕ್ಷಿಗಳನ್ನು ಒಟ್ಟಾಗಿ

ನಿಪಿ-49(ಎ) ಎಂದು ಗುರುತಿಸಲಾಯಿತು. ಅವುಗಳ ಮೂಲ ಪ್ರತಿ ಬ್ಯಾಂಕ್ ನ ರೆಕಾರ್ಡ್ ರೂಂ ನಲ್ಲಿ ಇರುತ್ತದೆ. ಮೂಲ ದಾಖಲೆಗಳನ್ನು ನ್ಯಾಯಾಲಯದಲ್ಲಿ ವಿಚಾರಣೆ ಸಂದರ್ಭದಲ್ಲಿ ಹಾಜರುಪಡಿಸುವುದಾಗಿ ನಾನು ಹೇಳಿಕೆ ನೀಡಿರುತ್ತೇನೆ. ಐಎನ್ ಜಿ ವೈಶ್ಯ ಬ್ಯಾಂಕ್ ಆರ್ ಬಿ ಐ ಆದೇಶದಂತೆ ಕೊಟಕ್ ಬ್ಯಾಂಕ್ ನೊಂದಿಗೆ ವಿಲೀನಗೊಂಡಿರುತ್ತದೆ.

ಈ ಪ್ರಕರಣದ ತನಿಖಾಧಿಕಾರಿಯು ರಾಜು ಏಜೆನ್ಸಿಸ್ ಇವರ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಅದನ್ನು ಯಾರು ಆಪರೇಟ್ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ಕೇಳಿದ್ದು ಈ ಮಾಹಿತಿಯನ್ನು ದಿಃ18-3-2010ರ ಪತ್ರದಲ್ಲಿ ಈಗ ನನಗೆ ತೋರಿಸಿದ ದಾಖಲೆಯಂತೆ ನೀಡಿದ್ದೇನೆ. ಆ ದಾಖಲೆಯನ್ನು ನಿಪಿ-50 ಎಂದು ಸಾಕ್ಷಿಯ ರುಜುವನ್ನು ನಿಪಿ-50(ಎ) ಎಂದು ಗುರುತಿಸಲಾಯಿತು. ನಿಪಿ-49ರ ದಾಖಲೆಗಳನ್ನು ಮೂಲ ದಾಖಲೆ ನೋಡಿ ದೃಢೀಕರಿಸಿ ಕೊಟ್ಟಿರುತ್ತೇನೆ.

**ಪಾಟೀಸವಾಲುಃ 1ನೇ ಆರೋಪಿ ಪರ** ಶ್ರೀ ಎ ಹೆಚ್ ಬಿ **ವಕೀಲರಿಂದಃ**

ನಿಪಿ-49ರ ಚೆಕ್ಕುಗಳಲ್ಲಿ ಯಾವ ವ್ಯವಹಾರದ ಬಾಬ್ತು ನೀಡಲಾಗಿದೆ ಎಂದು ನಮೂದನೆ ಇಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿಯು ಬೇರೆ ಬ್ಯಾಂಕಿನ ಚೆಕ್ಕನ್ನು ನಮ್ಮ ಬ್ಯಾಂಕ್ ಗೆ ನಗದೀಕರಣಕ್ಕೆ ಹಾಕಿದಾಗ ಆ ಚೆಕ್ಕು ನಗದೀಕರಣಗೊಂಡ ನಂತರ ಆ ಚೆಕ್ಕನ್ನು ಯಾವ ಬ್ಯಾಂಕ್ ನವರು ನೀಡಿರುತ್ತಾರೋ ಅದೇ ಬ್ಯಾಂಕ್ ಗೆ ವಾಪಸ್ ಕಳುಹಿಸಬೇಕು ಎಂದರೆ ಸಾಕ್ಷಿಯು ಘಟನೆ ನಡೆಯುವುದಕ್ಕಿಂತ ಹಿಂದೆ ಆ ಕ್ರಮ ಇತ್ತು, ತದನಂತರದಲ್ಲಿ ನಗದೀಕರಣಕ್ಕೆ ಬಂದ ಚೆಕ್ಕನ್ನು ನಗದೀಕರಣಗೊಂಡ ನಂತರ ನಮ್ಮ ಬ್ಯಾಂಕಿನಲ್ಲೇ ಇಟ್ಟುಕೊಳ್ಳುತ್ತೇವೆ ಎನ್ನುತ್ತಾರೆ. 2006ರಲ್ಲಿ ಯಾವ ಬ್ಯಾಂಕಿನಲ್ಲಿ ಚೆಕ್ಕು ನೀಡಿರುತ್ತಾರೋ ಅದೇ ಬ್ಯಾಂಕಿಗೆ ವಾಪಸ್ಸು ಹೋಗುತ್ತಿತ್ತು. ನಿಪಿ-49ರ ಚೆಕ್ಕನ್ನು ಬೆಂಗಳೂರಿನ ರೇಸ್ ಕೋರ್ಸ್ ರಸ್ತೆ ಶಾಖೆಯವರು ನೀಡಿದ್ದು ಎಂದರೆ ಸರಿ. ಹಾಗಿದ್ದಲ್ಲಿ ನಿಪಿ-49ನ್ನು ದೃಢೀಕರಿಸಲು ನಿಮ್ಮ ಬಳಿ ಮೂಲ ಚೆಕ್ಕು ಹೇಗೆ ಬಂತು ಎಂದರೆ ಸಾಕ್ಷಿಯು ಬೆಂಗಳೂರು ಶಾಖೆಯಿಂದ ತರಿಸಿಕೊಂಡು ದೃಢೀಕರಿಸಿರುತ್ತೇನೆ ಎನ್ನುತ್ತಾರೆ. 2006ರಲ್ಲಿ ನಾನು ಮೈಸೂರಿನ ಐಸಿಐಸಿಐ ಬ್ಯಾಂಕಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಮೂಲ ಚೆಕ್ಕನ್ನು ಕಳುಹಿಸಿಕೊಡುವಂತೆ ಬೆಂಗಳೂರು ಶಾಖೆಗೆ ನಾನು ಪತ್ರವ್ಯವಹಾರ ಮಾಡಿಲ್ಲ, ನಮ್ಮ ಬ್ಯಾಕಿನ ಅಧೀನ ಸಿಬ್ಬಂದಿಗಳು ಮಾಡಿರುತ್ತಾರೆ ಎನ್ನುತ್ತಾರೆ. 2006ರಲ್ಲಿ ಶಿವಮೊಗ್ಗ ಶಾಖೆಯಲ್ಲಿ ಯಾರು ಮ್ಯಾನೇಜರ್ ಆಗಿದ್ದರೆಂದು ನನಗೆ ನೆನಪಿಲ್ಲ. ನಿಪಿ-49ರ ದಾಖಲೆಗಳಲ್ಲಿ ಸುಮಾರು 9 ದಾಖಲೆಗಳಲ್ಲಿ ಕ್ಲಿಯರಿಂಗ್ ಬ್ಯಾಂಕ್ ವಿಜಯಾ ಬ್ಯಾಂಕ್ ಮತ್ತು ಒಂದು

ದಾಖಲೆಯಲ್ಲಿ ಯುಟಿಐ ಬ್ಯಾಂಕ್ ಎಂದು ಸೀಲು ಇದೆ ಅದು ಹೇಗೆ ಎಂದರೆ ಸಾಕ್ಷಿಯು ರಾಜು ಏಜೆನ್ಸಿಯವರು ಆ ಚೆಕ್ಕುಗಳನ್ನು ಈ ಬ್ಯಾಂಕುಗಳಲ್ಲಿ ನಗದೀಕರಣಕ್ಕೆ ಕಳುಹಿಸಿರುತ್ತಾರೆ, ಅದನ್ನು ಅವರು ನಮ್ಮ ಬ್ಯಾಂಕಿಗೆ ಕಳುಹಿಸಿರುವುದು, ಆದ್ದರಿಂದ ಅವರ ಸೀಲು ಇರುವುದು ಎನ್ನುತ್ತಾರೆ. ಶಿವಮೊಗ್ಗ ಶಾಖೆಯಿಂದ ನಾವು ಆ ಚೆಕ್ಕುಗಳನ್ನು ನಗದೀಕರಿಸಿಕೊಟ್ಟಿದ್ದೇವೆ ಎಂಬ ಬಗ್ಗೆ ನಮ್ಮ ಅಧಿಕಾರಿಯ ಸಹಿ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಮತ್ತು ಪೊಲೀಸರ ಕೋರಿಕೆಯ ಮೇರೆಗೆ ನಿಪಿ-49ರ ದಾಖಲೆಗಳನ್ನು ದೃಢೀಕರಿಸಿ ಕೊಟ್ಟಿರುವುದು ಎಂದರೆ ಸರಿಯಲ್ಲ. ಬೆಂಗಳೂರು ಶಾಖೆಯಿಂದ ಮೂಲ ಚೆಕ್ಕುಗಳನ್ನು ತರಿಸಿಕೊಳ್ಳಲು ನಿಮ್ಮ ಶಾಖೆಯಿಂದ ಯಾರು ಪತ್ರವ್ಯವಹಾರ ಮಾಡಿದ್ದು ಎಂದು ನನಗೆ ಹೇಳಲಾಗುವುದಿಲ್ಲ ಹಾಗೂ ಆ ಬಗ್ಗೆ ಪೊಲೀಸರಿಗೆ ದಾಖಲೆಗಳನ್ನು ಸಹ ನೀಡಿಲ್ಲ. ನಮ್ಮ ಶಾಖೆಯಿಂದ ಬೆಂಗಳೂರು ಶಾಖೆಗೆ ಮೂಲ ಚೆಕ್ಕುಗಳನ್ನು ತರಿಸಿಕೊಳ್ಳುವಂತೆ ಯಾವುದೇ ಪತ್ರ ವ್ಯವಹಾರ ಮಾಡಿದ್ದೂ ಇಲ್ಲ ಹಾಗೂ ಅಲ್ಲಿಂದ ನಮ್ಮ ಶಾಖೆಗೆ ಯಾವುದೇ ಚೆಕ್ಕುಗಳು ಬಂದಿದ್ದೂ ಇಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ** 2ನೇ **ಆರೋಪಿ ಪರ** ಶ್ರೀ ಜೆ ಎಸ್ **ವಕೀಲರಿಂದಃ**

(ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ, ಅನುಮತಿಸಿದ)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**